

ಎಮ್ಮೆಗಳ ಅಕ್ಕರೆಯ ಮೇವಿನ ತಾಣವಾದ ಗುತ್ತಿಗೇರಿ ಕೆರೆ ಇಂದು ಸುಂದರ ವಾಯುವಿಹಾರದ ತಾಣ.

ಹಿಂದೆ ಬಹುತೇಕ ಭೂಮಿಯಲ್ಲಿ ಮಳೆ ಆಶ್ರಿತ ಭತ್ತ ಬೆಳೆಯಲಾಗುತ್ತಿತ್ತು. ವಾಣಿಜ್ಯ ಬೆಳೆಯಾಗಿ ಹತ್ತಿ 80ರ ದಶಕದಲ್ಲಿ ಆಗಮಿಸಿತು. ಸಕ್ಕರೆ ಕಾರ್ಖಾನೆ ಆರಂಭವಾದ ಹತ್ತು ವರ್ಷದ ಹಿಂದೆ ಕಬ್ಬು ವಾಣಿಜ್ಯ ಬೆಳೆಯಾಗಿ ಹಿಗ್ಗಿತು. ಇಲ್ಲಿನ ಹೊಳೆ ಹಳ್ಳಗಳಿಗೆ ಚಿಕ್ಕಪುಟ್ಟ ಬಾಂದಾರಗಳಿದ್ದುದು ಬಿಟ್ಟರೆ ಬೇರೆ ನೀರಾವರಿ ಯೋಜನೆಯಿಲ್ಲ. ಸುಮಾರು 9000 ಹೆಕ್ಟೇರ್ ಪ್ರದೇಶದಲ್ಲಿ ಕಬ್ಬು ಬೆಳೆಯುವ ಇಲ್ಲಿ ನೀರಾವರಿಗೆ ಕೊಳವೆ ಬಾವಿ ಅನಿವಾರ್ಯ. 2–3 ಹೆಕ್ಟೇರ್ ಪ್ರದೇಶಕ್ಕೆ ಒಂದರಂತೆ ಸಾವಿರಾರು ಕೊಳವೆ ಬಾವಿಗಳನ್ನು ರೈತರೇ ಕೊರೆಸಿದ್ದಾರೆ. ಕೆರೆ ಅಚ್ಚುಕಟ್ಟಿನಲ್ಲಿರುವ ಇವುಗಳಲ್ಲಿ ಮೊದಲು 100–150 ಅಡಿಗೆ ದೊರೆಯುತ್ತಿತ್ತು. ನಂತರ 350–400 ಅಡಿಗೆ ಕುಸಿದಿತ್ತು. ಉತ್ತರ ಕನ್ನಡ ಜಿಲ್ಲೆಯಲ್ಲಿಯೇ ಅತಿಹೆಚ್ಚು ಅಂತರ್ಜಲ ಕುಸಿತದ ಪ್ರದೇಶವೆಂದರೆ ಹಳಿಯಾಳ. ಈಗ ಕೆರೆಯಲ್ಲಿ ನೀರು ನಿಂತಿದ್ದರಿಂದ ಕೃಷಿ, ಕುಡಿಯುವ ನೀರಿಗೆ ಅನುಕೂಲವಾಗಿದೆ. ರೈತರ ಆರ್ಥಿಕತೆಯಲ್ಲಿ ಬದಲಾವಣೆ ಕಾಣಿಸುತ್ತಿದೆ. ಕೃಷಿಗೆ ಪೂರಕ ಹೈನುಗಾರಿಕೆ ಬೆಳೆಯುತ್ತಿದೆ.

ಕೆರೆ ಹೂಳು ತೆಗೆದ ಮಾತ್ರಕ್ಕೆ ನೀರಿನ ಸಮಸ್ಯೆ ಸಂಪೂರ್ಣ ಪರಿಹಾರವಾಯ್ತೆಂದು ಅರ್ಥವಲ್ಲ. ಕೆರೆಗಳಿಗೆ ಕಾಳಿ ನದಿ ನೀರು ತುಂಬಿಸುವ ಯೋಜನೆಯೊಂದು ಹಳಿಯಾಳದಲ್ಲಿ ಜಾರಿಯಾಗುತ್ತಿದೆ. ಸಕ್ಕರೆ ಕಾರ್ಖಾನೆ ಕಾರಣಕ್ಕೆ ಕಬ್ಬಿನ ಏಕಬೆಳೆಯ ಓಟದಿಂದ ಕೃಷಿ ಪರಿಸರ ಅದಲು ಬದಲಾಗುತ್ತಿದೆ. ಮಣ್ಣಿಗೆ ಶಕ್ತಿ ಸುಸ್ಥಿರತೆಗೆ ಮರ ಗಿಡ ಬೆಳೆಸುವುದು, ಕೃಷಿ ವೈವಿಧ್ಯ ಪೋಷಣೆ ಅಗತ್ಯ. ಕಬ್ಬಿನ ಎಲೆಗಳನ್ನು ಸುಡುವ ಕ್ರಮ ಕೈಬಿಟ್ಟು ಸಾವಯವ ವಸ್ತುವನ್ನು ಮಣ್ಣಿಗೆ ಮರಳಿಸುವ ದಾರಿ ಮುಖ್ಯ. ಮಾವಿನ ಜೊತೆಗೆ ಬಿದಿರು ಬೆಳೆಸಬಹುದು. ತರಕಾರಿ, ಹಣ್ಣು, ಔಷಧ ಸಸ್ಯ ಬೆಳೆಗೆ ಆದ್ಯತೆ ಬೇಕು. ನೀರಿನ ಮಿತ ಬಳಕೆಯ ಮಾರ್ಗ ಅನುಸರಿಸುವುದು ಭವಿಷ್ಯದ ಜಲಕ್ಷಾಮ ಗೆಲ್ಲುವ ಮಾರ್ಗವಾಗಿದೆ.

## ಜಲ ಪ್ರತಿನಿಧಿಯಾದ ಜನಪ್ರತಿನಿಧಿ!

‘ಕೆರೆಯ ಹೂಳನ್ನು ಆಳಕ್ಕೆ ತೆಗೆಯಬೇಕು. ಆಗ ಜಾಸ್ತಿ ನೀರು ನಿಲ್ಲಲು ಸಾಧ್ಯ. ಆಳಕ್ಕೆ ಹೂಳೆತ್ತುವ ಕ್ರಮವನ್ನು ಸರ್ಕಾರ ಕಡ್ಡಾಯವಾಗಿ ಅನುಸರಿಸಬೇಕು’ ಎಂದು ಹಳಿಯಾಳ ಶಾಸಕ, ದೇಶಪಾಂಡೆ ಟ್ರಸ್ಟ್ ಅಧ್ಯಕ್ಷ ಆರ್.ವಿ.ದೇಶಪಾಂಡೆ ಈಗ ಕೆರೆಯ ಕಥೆ ಹೇಳುತ್ತಾರೆ.

‘ಕೆರೆ ಹೂಳೆತ್ತುವ ಕೆಲಸ ಸಾರ್ವಜನಿಕ ಜೀವನದಲ್ಲೇ ಅತ್ಯಂತ ನೆಮ್ಮದಿ ನೀಡಿದ ಕಾಯಕವಾಗಿದೆ. ಹಳ್ಳಿಗಳ ಅಭಿವೃದ್ಧಿಗೆ ರಸ್ತೆಗಳಷ್ಟೇ ಕೆರೆಗಳೂ ಮುಖ್ಯ. ನಾವು ಬೃಹತ್ ನೀರಾವರಿಗೆ ನೀಡಿದ ಮಹತ್ವವನ್ನು ಕಳೆದ 40 ವರ್ಷಗಳೀಚೆಗೆ ಕೆರೆಗಳಿಗೆ ನೀಡಿಲ್ಲ. ಊರಿನ ಅಂತರ್ಜಲ ಹೆಚ್ಚಿಸಿ ಜನ ಜಾನುವಾರುಗಳಿಗೆ ಉಪಯುಕ್ತವಾದ ಕೆರೆಗಳ ಪುನರುಜ್ಜೀವನ ಅತ್ಯಂತ ಮಹತ್ವದ ಕೆಲಸ. ಇದನ್ನು ಸರ್ಕಾರದ ಇಲಾಖೆಯ ಜೊತೆಗೆ ನಾವುಗಳೆಲ್ಲ ಸೇರಿ ಮಾಡಬೇಕು. ಸರ್ಕಾರ ಕೆರೆಗೆ ನೀಡಿದ ಹಣ ದಂಡೆ ದುರಸ್ತಿ, ಕಾಲುವೆ, ತೂಬು ಸರಿಪಡಿಸುವುದಕ್ಕೆ ಖರ್ಚಾಗುತ್ತದೆ. ಕೆರೆಯಲ್ಲಿ ಹೆಚ್ಚು ನೀರು ನಿಂತರೆ ಮಾತ್ರ ಅಂತರ್ಜಲ ಹೆಚ್ಚಳಕ್ಕೆ ಅನುಕೂಲ. ಆಳಕ್ಕೆ ಹೂಳೆತ್ತುವ ಕೆಲಸವನ್ನು ರಾಜ್ಯದಾದ್ಯಂತ ಸಾರ್ವಜನಿಕ ಸಹಭಾಗಿತ್ವದಲ್ಲಿ ಕೈಗೊಂಡಾಗ ನೀರಿನ ಸಮಸ್ಯೆಗೆ ತಕ್ಕಮಟ್ಟಿನ ಪರಿಹಾರ ಸಾಧ್ಯ. ಹಳ್ಳಿಯಲ್ಲಿ ಮಳೆನೀರು ಹಿಡಿಯಲು ಕೆರೆ ಮಾಡುವುದು ಆದ್ಯತೆಯ ಕಾರ್ಯವಾಗಬೇಕು’ ಎಂದು ದೇಶಪಾಂಡೆ ಹೇಳುತ್ತಾರೆ.

ಇಡೀ ದೇಶದಲ್ಲಿಯೇ ಕೆರೆಯೆಂಬ ವಿಕೇಂದ್ರೀಕೃತ ನೀರಾವರಿಯ 1700 ವರ್ಷಗಳ ಭವ್ಯ ಇತಿಹಾಸ ಕರ್ನಾಟಕದ್ದಾಗಿದೆ. ಕೆರೆ ಹೂಳು ತೆಗೆಯುವ ವಿಚಾರ ಬಂದಾಗ, ‘ಒಂದು ಮೀಟರ್ ಆಳ ಮಾತ್ರ ತೆಗೆಯಬೇಕು’ ಎನ್ನುತ್ತ ಮಂಜೂರಿ ಹಣದ ಶೇಕಡಾ 10 ಭಾಗ ಮಾತ್ರ ಹೂಳು ತೆಗೆಯಲು ವಿನಿಯೋಗಿಸುವ ಪದ್ಧತಿ ಸರ್ಕಾರದ್ದಾಗಿದೆ. ಕೆರೆ ಸೌಂದರ್ಯೀಕರಣಕ್ಕೆ ಯೋಜನೆಯ ಹೆಚ್ಚಿನ ಹಣ ಖರ್ಚುಮಾಡುವ ಆಡಳಿತ ವರ್ಗವಿದೆ. ಸಾಯುವ ಕೆರೆಗೆ ಇದು ಶೃಂಗಾರ ಮಾಡಿದಂತೆ! ನೀರಿನ ಪಾತ್ರೆ ಉಳಿಸಲು ಕೆರೆಯಲ್ಲಿ ಭರ್ತಿಯಾದ ಹೂಳು ತೆಗೆಯುವುದು ತುರ್ತಾಗಿ ನಡೆಯಬೇಕಾದ ಕೆಲಸ.

ಕೆರೆಗಳು ಮಳೆ ನೀರು ಹಿಡಿಯುವ ಅವಕಾಶ ಕಳೆದುಕೊಂಡಿದ್ದು ಜಲಕ್ಷಾಮಕ್ಕೆ ಮುಖ್ಯಕಾರಣವಾಗಿದೆ. ಕೆರೆ ಹೂಳು ತೆಗೆಯಲು ಸದಾ ಸರ್ಕಾರದತ್ತ ಬೆರಳು ತೋರಿಸುವ ಜನಪ್ರತಿನಿಧಿಗಳು, ಸಚಿವರು ಸ್ವಯಂ ಆಸಕ್ತಿಯಿಂದ ಒಂದು ಹೆಜ್ಜೆ ಕೆರೆಯ ಕಡೆಗೆ ನಡೆಯುವುದನ್ನು ಕಲಿಯಬೇಕು. ತಮ್ಮ ಸಂಪರ್ಕ ಬಳಸಿ ಸಾರ್ವಜನಿಕ ಸಹಕಾರದಿಂದ ಸಮಗ್ರವಾಗಿ ಹೂಳೆತ್ತುವ ಕೆಲಸಕ್ಕೆ ಮುಂದಾಗಬೇಕು. ಭಾಷಣದ ಭರವಸೆ ಹಳಸಲಾಗಿದೆ, ಬದುಕು ಬದಲಿಸಲು ಜಲೋಪಯೋಗಿ ಕೆಲಸಗಳು ತುರ್ತಾಗಿ ನಡೆಯಬೇಕಾಗಿದೆ. ಈ ನಿಟ್ಟಿನಲ್ಲಿ ಹಳಿಯಾಳದ ಯಶೋಗಾಥೆ ಹೊಸ ಸಾಧ್ಯತೆ ಹೇಳುತ್ತದೆ.

(ಚಿತ್ರಗಳು ಲೇಖಕರವು)

ಪ್ರತಿಕ್ರಿಯಿಸಿ: **feedback@sudha.co.in**

